ಹೋರಾಟಗಾರ ದಾಮೋದರ ಮಾವ್‌ಜೊ ಒಬ್ಬ ಕ್ರಿಯಾಶೀಲ ಲೇಖಕ. ಗೋವೆಯ ಬುದ್ಧಿಜೀವಿಗಳಲ್ಲಿ ಅವರೂ ಒಬ್ಬರು. 1961ರಲ್ಲಿ ಗೋವೆ ಸ್ವತಂತ್ರಗೊಂಡಾಗ ಅದು, ಮಹಾರಾಷ್ಟ್ರದ ಅವಿಭಾಜ್ಯ ಅಂಗವಾದ್ದರಿಂದ ಗೋವಾ ಮಹಾರಾಷ್ಟ್ರದಲ್ಲಿ ವಿಲೀನವಾಗಬೇಕೆಂಬ ಕೂಗೆದ್ದಾಗ ಒಂದು ಆಂದೋಲನ ರೂಪುಗೊಂಡಿತು. ಅದರಲ್ಲಿ ದಾಮೋದರ ಮಾವ್‌ಜೊ ಮುಂಚೂಣಿಯಲ್ಲಿದ್ದರು. ಗೋವೆ ಸ್ವತಂತ್ರ ರಾಜ್ಯವಾದಾಗ ಗೋವೆಯ ರಾಜ್ಯಭಾಷೆಯ ಸಮಸ್ಯೆ ತಲೆಎತ್ತಿದಾಗ, ಗೋವೆಯ ಅಸ್ತಿತ್ವ, ಅಸ್ಮಿತೆಯ ಪ್ರಶ್ನೆ ಬಂದಾಗ ದಾಮೋದರರು ಚಳವಳಿಯ ತಂಡದ ಮುಂದಾಳುಗಳಲ್ಲಿ ಒಬ್ಬರಾಗಿ ದುಡಿದಿದ್ದಾರೆ. ದಾಬೋಲ್ಕರ್, ಕಲಬುರ್ಗಿ, ಗೌರಿ ಲಂಕೇಶರ ಹತ್ಯೆಯಾದಾಗಲೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಅವರ ಜೀವಕ್ಕೆ ಅಪಾಯವಿದೆಯೆಂದು ಅವರಿಗೆ ಪೊಲೀಸ್ ರಕ್ಷಣೆಯನ್ನೂ ಕೊಡಲಾಗಿತ್ತು.

ನಾನು ಗೋವೆಯಲ್ಲಿ ನಾಲ್ವತ್ತು ವರ್ಷ ಇದ್ದವನು. ನನ್ನ ಆಪ್ತ ಸ್ನೇಹಿತರಲ್ಲಿ ಅವರೂ ಒಬ್ಬರು. ಅವರ ಮನೆಗೆ ಎಷ್ಟೋ ಬಾರಿ ಹೋಗಿ ಬಂದಿದ್ದೇನೆ. ಇತ್ತೀಚೆಗೆ ನಾನು ಮತ್ತು ಲೇಖಕ ಗೋಪಾಲಕೃಷ್ಣ ಪೈ ಅವರ ಮನೆಗೆ ಹೋಗಿಬಂದಿದ್ದೇವೆ. ಅವರಿಗೆ ಬಂದಿರುವ ಜ್ಞಾನಪೀಠ ಪ್ರಶಸ್ತಿ ನಮ್ಮ ಖುಷಿಯನ್ನು ಹೆಚ್ಚಿಸಿದೆ.

ದಾಮೋದರ ಮಾವ್‌ಜೊ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಗೀಚುವ, ಕುಳಿತಲ್ಲೇ ಕುಳಿತು ಸಮಾಜವನ್ನು ವ್ಯಾಖ್ಯಾನಿಸುವ ಲೇಖಕರಲ್ಲ. ಅವರು ವರ್ತಮಾನದ ಆಗುಹೋಗುಗಳೊಂದಿಗೆ ಸಕ್ರಿಯರಾಗಿ ಸ್ಪಂದಿಸುತ್ತಾರೆ. ಆದ್ದರಿಂದಲೇ ಅವರ ಸಾಹಿತ್ಯದಲ್ಲಿ ಜೀವಂತಿಕೆಯಿದೆ.

ಸಾಹಿತ್ಯ ಓದುಗರ ಮೇಲೆ ಪ್ರಭಾವ ಬೀರುತ್ತದೆಯೇ? ಎಂಬ ಪ್ರಶ್ನೆಗೆ ಅವರು, 'ಸಾಹಿತ್ಯವು ತತ್ಕಾಲೀನ ಸಮಾಜದ ಇತಿಹಾಸವೆನ್ನಬಹುದು. ನಮ್ಮೊಳಗಿನ ಅನೇಕ ಕತೆಗಾರರ ಕತೆಗಳು ಮುಂದಿನ ತಲೆಮಾರಿಗೆ ಆ ಕಾಲದ ಸಮಾಜದ ಚಿತ್ರ ನೀಡಬಲ್ಲವು. ನನ್ನ ಸಾಹಿತ್ಯ ನಾನು ನೋಡಿದ ಬದುಕನ್ನೇ ಚಿತ್ರಿಸುತ್ತದೆ. ಸಾಹಿತ್ಯ ಪರೋಕ್ಷವಾಗಿ ಓದುಗರಿಗೆ ಪ್ರೇರಣೆ ಒದಗಿಸುತ್ತದೆ. ಮಾರ್ಗದರ್ಶನ ಮಾಡುತ್ತದೆ. 'ಕಾರ್ಮೆಲೀನ' ಕಾದಂಬರಿಯ ಕನ್ನಡ ಅನುವಾದವನ್ನು ಓದಿದ ಯು.ಆರ್. ಅನಂತಮೂರ್ತಿಯವರು ಒಂದು ಅಪರಾಹ್ನ ನನಗೆ ಫೋನ್ ಮಾಡಿ, ಸುಮಾರು ಹದಿನೈದು ನಿಮಿಷ ಮಾತಾಡಿದ್ದರು. 'ಇದು ಓದುಗರ ಮೇಲೆ ಬೀರುವ ಪ್ರಭಾವವಲ್ಲವೆ?' ಎಂದು ಉತ್ತರಿಸಿದ್ದರು.

'ನಮ್ಮ ಸಾಹಿತ್ಯ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಳ್ಳಬೇಕು. ನಾವೂ ಬೇರೆ ಬೇರೆ ಭಾಷೆಯಲ್ಲಿ ಬಂದ ಸಾಹಿತ್ಯ ಓದಬೇಕು. ಆಗಲೇ ನಾವು ಎಲ್ಲಿದ್ದೇವೆ ಎಂದು ಅರ್ಥವಾಗುತ್ತದೆ' ಎನ್ನುತ್ತಾರೆ ದಾಮೋದರ ಮಾವ್‌ಜೊ.


**ಶಾ.ಮಂ. ಕೃಷ್ಣರಾಯ**

ಲೇಖಕ, ಪತ್ರಕರ್ತ ಶಾ.ಮಂ. ಕೃಷ್ಣರಾಯರು ಮೈಸೂರು ವಿಶ್ವವಿದ್ಯಾಲಯದ ಬಿ.ಎಡ್., ಎಂ.ಎ. ಪದವಿ ಪಡೆದು ದಶಕಗಳ ಕಾಲ ಗೋವೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ನಾಟಕ, ಕತೆ, ಮಕ್ಕಳ ಸಾಹಿತ್ಯ, ಪ್ರವಾಸ ಕಥನ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ಸಂಪಾದನೆ ಹಾಗೂ ಅನುವಾದ ಪ್ರಕಾರಗಳಲ್ಲಿ 90ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರು ಕೊಂಕಣಿ, ಮರಾಠೀ ಭಾಷೆಗಳ ಕೆಲವು ಅತ್ಯುತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.